ಪ್ರಜಾವಾಣಿ

Wednesday, April 7th, 2010

### ಮಂಗಳೂರು ವಿವಿ 28ನೇ ಘಟಿಕೋತ್ಸವ: ಸಚಿವ ತರೂರ್ ಅಭಿಮತ

# ‘ಜಾಗತಿಕ ವ್ಯವಹಾರ: ಚಿಂತನೆ ಬದಲಾಗಲಿ’

ಪ್ರಜಾವಾಣಿ ವಾರ್ತೆ

**ಮಂಗಳೂರು:** ‘ಅಂತರರಾಷ್ಟ್ರೀಯ ಸಂಬಂಧಗಳ ಕುರಿತ ಚಿಂತನೆಯನ್ನು ನಾವು ಬದಲಾಯಿಸಿಕೊಳ್ಳಬೇಕಿದೆ. ಶಿಕ್ಷಣ ನೀತಿ ರೂಪಿಸುವವರ ಸಹಯೋಗದಲ್ಲಿ ಈ ನಿಟ್ಟಿನ ಬದಲಾವಣೆ ತರಲು ವಿದೇಶಾಂಗ ಸಚಿವಾಲಯ ಬಯಸಿದೆ ಎಂದು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಶಶಿ ತರೂರ್ ಹೇಳಿದರು.

ಮಂಗಳೂರು ವಿವಿಯ ಮಂಗಳಗಂಗೋತ್ರಿ ವಿಜ್ಞಾನ ಸಂಕೀರ್ಣ ಆವರಣದಲ್ಲಿ ಮಂಗಳವಾರ ನಡೆದ ವಿವಿಯ 28ನೇ ಘಟಿಕೋತ್ಸವ ಸಂದರ್ಭದಲ್ಲಿ ಘಟಿಕೋತ್ಸವ ಭಾಷಣ ಮಾಡಿದ ಅವರು, ಅಭಿವೃದ್ಧಿ ದಿಸೆಯಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ನಮ್ಮ ಸಾಮರ್ಥ್ಯ ಏನು ಎನ್ನುವುದನ್ನು ತೋರಿಸಲು ಶಿಕ್ಷಣ ಮೂಲಮಂತ್ರವಾಗಿದೆ ಎಂದು ಅಭಿಪ್ರಾಯಪಟ್ಟರು.

ನಮ್ಮ ವಿಶ್ವವಿದ್ಯಾನಿಲಯ ಕ್ಯಾಂಪಸ್‌ಗಳಲ್ಲಿ ಅಂತರರಾಷ್ಟ್ರೀಯ ಸಂಬಂಧಗಳ ವಿಷಯ ಅನಾದರಕ್ಕೆ ಒಳಗಾಗಿದೆ. ಅಂತರರಾಷ್ಟ್ರೀಯ ವಿಷಯಗಳ ಚಿಂತಕರು ನಮ್ಮಲ್ಲಿ ಸಾಕಷ್ಟು ಮಂದಿ ಇದ್ದಾರೆ. ಆದರೆ ಅವರ ಆಶಯ, ಚಿಂತನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ ಎಂದು ವಿಷಾದಿಸಿದರು.

‘ವಿದೇಶಾಂಗ ನೀತಿ ತುಂಬ ಪ್ರಾಮುಖ್ಯವಾಗಿದೆ. ಅದನ್ನು ವಿದೇಶಾಂಗ ವ್ಯವಹಾರ ಸಚಿವಾಲಯಕ್ಕೆ ಮಾತ್ರ ಬಿಟ್ಟುಬಿಡಬೇಕು. ಎಲ್ಲ ರಾಷ್ಟ್ರಗಳ ವಿದೇಶಾಂಗ ನೀತಿಯ ಅಂತಿಮ ಗುರಿ ಆಯಾ ದೇಶಗಳ ನಾಗರಿಕರ ಭದ್ರತೆ ಮತ್ತು ಒಳಿತು ಆಗಿದೆ’ ಎಂದರು.

ವಿಶ್ವದ ಆರ್ಥಿಕ ಶಕ್ತಿಗಳಲ್ಲಿ ಭಾರತವೂ ಒಂದು. ಜಾಗತಿಕ ವೇದಿಕೆಯಲ್ಲಿ ಅಂತರರಾಷ್ಟ್ರೀಯ ವಿಷಯಕ್ಕೆ ಸಂಬಂಧಿಸಿ ಜವಾಬ್ದಾರಿಯುತ ಹೊಣೆಗಾರಿಕೆಯನ್ನೂ ಹೊಂದಿದೆ. ಆದರೆ ಸದ್ಯದ ಸವಾಲುಗಳನ್ನು ಎದುರಿಸಲು ನಮ್ಮ ವಿದೇಶಾಂಗ ನೀತಿ ಸಮರ್ಥವಾಗಿದೆಯೇ ಎನ್ನುವ ಬಗ್ಗೆ ಆಳವಾದ ಚಿಂತನೆ ನಡೆಯಬೇಕು ಎಂದರು.

ದೇಶದ ಮತ್ತು ಜಗತ್ತಿನಾದ್ಯಂತದ ವಿದ್ಯಾರ್ಥಿಗಳಿಗೆ ಮತ್ತು ವೃತ್ತಿಪರರಿಗೆ ಉತ್ತಮ ಸೌಕರ್ಯ ಕಲ್ಪಿಸುವ ಮೂಲಕ ಮಂಗಳೂರು ಸಹಿತ ಕರ್ನಾಟಕದ ಅನೇಕ ನಗರಗಳನ್ನು ಶಿಕ್ಷಣ ಮತ್ತು ಜ್ಞಾನ/ಮಾಹಿತಿ ಹಬ್‌ಗಳಾಗಿ ರೂಪಿಸಲು ಸಾಕಷ್ಟು ಅವಕಾಶಗಳಿವೆ ಎಂದೂ ಅವರು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲ ಹಾಗೂ ಕುಲಾಧಿಪತಿ ಎಚ್. ಹಂಸರಾಜ್ ಭಾರದ್ವಾಜ್, ಗೌರವ ಡಾಕ್ಟರೇಟ್ ಹಾಗೂ ಪದವಿ ಪ್ರದಾನ ಮಾಡಿದರು. ಉನ್ನತ ಶಿಕ್ಷಣ ಸಚಿವ ಹಾಗೂ ಸಹ ಕುಲಾಧಿಪತಿ ಅರವಿಂದ ಲಿಂಬಾವಳಿ, ವಿವಿ ಕುಲಪತಿ ಪ್ರೊ.ಟಿ.ಸಿ.ಶಿವಶಂಕರ್ ಮೂರ್ತಿ, ಕುಲಸಚಿವ ಡಾ.ಚಿನ್ನಪ್ಪಗೌಡ ಇದ್ದರು.

## ಡಾಕ್ಟರೇಟ್- ಚಿನ್ನದ ಪದಕ

ಅಣು ವಿಜ್ಞಾನಿ ಡಾ.ರಾಕೇಶ್ ಕುಮಾರ್ ಭಂಡಾರಿ (ಡಾಕ್ಟರ್ ಆಫ್ ಸೈನ್ಸ್), ಸಮಾಜ ಸೇವೆಗಾಗಿ ಎ.ಎಸ್. ವಿಷ್ಣು ಭರತ್, ಕೇಂದ್ರದ ಮಾಜಿ ಸಚಿವ ಆಸ್ಕರ್ ಫರ್ನಾಂಡಿಸ್, ಮಧುರ ಎಂ.ಛತ್ರಪತಿ, ಕಲಾವಿದ ಕೋಳ್ಯೂರು ರಾಮಚಂದ್ರ ರಾವ್, ಎಂ.ಮೋಹನ್ ಆಳ್ವ ಹಾಗೂ ಬೆಂಗಳೂರಿನ ಆರ್. ಚೆನ್‌ರಾಜ್ ಜೈನ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಮಾನವಿಕ ವಿಭಾಗದಲ್ಲಿ 14, ವಿಜ್ಞಾನ ವಿಭಾಗದಲ್ಲಿ 40 ಹಾಗೂ ವಾಣಿಜ್ಯ ವಿಭಾಗದಲ್ಲಿ 8 ಡಾಕ್ಟರ್ ಆಫ್ ಫಿಲಾಸಫಿ ಸೇರಿ ಒಟ್ಟು 62 ಸಂಶೋಧನಾರ್ಥಿಗಳು ಡಾಕ್ಟರೇಟ್ ಪದವಿ ಪ್ರಮಾಣ ಪತ್ರ ಪಡೆದರು. 30 ವಿದ್ಯಾರ್ಥಿಗಳು ಚಿನ್ನದ ಪದಕ, 56 ವಿದ್ಯಾರ್ಥಿಗಳು ನಗದು ಬಹುಮಾನ ಸ್ವೀಕರಿಸಿದರು.